**ಸಾಕ್ಷಿಯನ್ನು ದಿಃ 28.07.2023 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 5 ಮತ್ತು 7 ನೇ ಪ್ರತಿವಾದಿ ಪರ ವಕೀಲರಿಂದಃ**

ಓ.ಎಸ್. 325/2007 ರ ವಿಷಯವನ್ನು ಇದುವರೆವಿಗೂ ನನ್ನ ತಾಯಿ ಬಳಿ ವಿಚಾರಿಸಿರುವುದಿಲ್ಲ. ಸದರಿ ದಾವೆಯ ಬಗ್ಗೆ ಯಾಕೆ ವಿಚಾರಿಸಿರುವುದಿಲ್ಲ ಎಂದರೆ ಸಾಕ್ಷಿಯು ವಿಚಾರಿಸಬೇಕು ಎಂದು ಅನಿಸಿರುವುದಿಲ್ಲ ಹಾಗಾಗಿ ವಿಚಾರಿಸಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ತಾಯಿ ದಿಃ 18.06.1981 ರಲ್ಲಿಯೇ ವಿಭಾಗ ಆಗಿರುತ್ತದೆ ಎಂದು ಹೇಳಿದ ಕಾರಣ ನಾನು ವಿಚಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ. 2 ಆರ್ .ಟಿ.ಸಿಯಲ್ಲಿ ಮಹದೇವಮ್ಮ ಕೋಂ ಮಹದೇವನಾಯಕ, ಸಣ್ಣಮ್ಮ ಕೋಂ ಚಿಕ್ಕ ಕರಿನಾಯಕ ಎಂದು ನಮೂದಾಗಿದೆ ಎಂದರೆ ಸರಿ. ನಿಪಿ. 8 ರಿಂದ 11 ರಲ್ಲಿ ಸಣ್ಣಮ್ಮ ಕೋಂ ಚಿಕ್ಕ ಕರಿನಾಯಕ ಎಂದು ನಮೂದಾಗಿದೆ ಎಂದರೆ ಸರಿ. ನಿಪಿ. 8 ರಿಂದ 11 ರಲ್ಲಿ ನನ್ನ ತಂದೆಯ ಹೆಸರು ಇರುವುದಿಲ್ಲ ಎಂದರೆ ಸರಿ. ನಿಪಿ. 8 ರಿಂದ 11 ಆರ್.ಟಿ.ಸಿ. ಗಳು ಸರಿ ಇಲ್ಲ ಎಂದು ಸಂಬಂಧಪಟ್ಟ ಇಲಾಖೆಯಲ್ಲಿ ನಾನು ಮತ್ತು ನನ್ನ ಅಕ್ಕ ಪ್ರಶ್ನಿಸಿರುವುದಿಲ್ಲ. ನಿಪಿ. 16 ಮತ್ತು ನಿಪಿ. 17 ರಲ್ಲಿ ತಾಯಿಯ ಹೆಸರು ಲಕ್ಷ್ಮಮ್ಮ ಎಂದು ನಮೂದಾಗಿದೆ ಎಂದರೆ ಸರಿ.

ಮ್ಯುಟೇಶನ್ ನಲ್ಲಿ ಮರಂಕಮ್ಮ ಕೋಂ ಕರಿನಾಯಕ ಇವರು ಲಕ್ಕೇಗೌಡ ಬಿನ್ ರುದ್ರೇಗೌಡ ಇವರಿಗೆ ಸರ್ವೇ ನಂ. 112/1 ಬಿ ನಲ್ಲಿ 26 ಗುಂಟೆ ಮಾರಾಟ ಮಾಡಿರುತ್ತಾರೆ ಎಂದು ಎಂ.ಆರ್. 61/2005-06 ರಲ್ಲಿ ನಮೂದಾಗಿದೆ ಎಂದರೆ ಸಾಕ್ಷಿಯು ಮ್ಯುಟೇಶನ್ ನ ಜೆರಾಕ್ಸ್ ಪ್ರತಿಯನ್ನು ಓದಿ ನೋಡಿ ಒಪ್ಪಿದ ಮೇರೆಗೆ ನಿಡಿ. 2 ಎಂದು ಗುರುತಿಸಲಾಯಿತು. ಅದೇ ರೀತಿ ಎಸ್. ಅನ್ನಪೂರ್ಣೇಶ್ವರಿ ಇವರು ಲಕ್ಷ್ಮೀರಾಜಗೋಪಾಲ್ ಇವರಿಗೆ ಸರ್ವೇ ನಂ. 112/1 ಬಿ ನಲ್ಲಿ 20 ಗುಂಟೆ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಸರ್ವೇ ನಂ. 112/2 ರಲ್ಲಿ ಎಳವನಾಯಕ ಬಿನ್ ಕರಿನಾಯಕ ಇವರು ಕೆಂಪದೇವಮ್ಮ ಇವರಿಗೆ 11 ಗುಂಟೆ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಈ ದಾವೆ ಹೂಡಿದ ನಂತರವಾಗಲೀ ಆರ್.ಟಿ.ಸಿ ಗಳಲ್ಲಿರುವ ಒಕ್ಕಣಿಕೆ ಸರಿ ಇಲ್ಲ ಎಂದು ಪ್ರಶ್ನಿಸಿ ಬೇರೆ ದಾವೆ ಹೂಡಿರುವುದಿಲ್ಲ. ಸರ್ವೇ ನಂ. 361/2 ರಲ್ಲಿ 12

ಗುಂಟೇ ಜಮೀನನ್ನು ಸಣ್ಣಮ್ಮ ರವರಿಗೆ ಲೇಟ್ ರಂಗನಾಯಕನ ಮಗ ಚಿಕ್ಕಕರಿನಾಯಕ ಹಾಗೂ ಅವರ ಮಕ್ಕಳಾದ ಮಹದೇವನಾಯಕ ಹಾಗೂ ಹುಚ್ಚನಾಯಕ ಇವರು ದಿಃ 20.06..1991 ರಲ್ಲಿ ನೊಂದಾಯಿತ ಕ್ರಯಪತ್ರದ ಮುಖಾಂತರ ಮಾರಾಟ ಮಾಡಿರುತ್ತಾರೆ ಎಂದರೆ ಆ ಬಗ್ಗೆ ಗೊತ್ತಿಲ್ಲ.

ನಾನು ಹುಚ್ಚಯ್ಯ ರವರ ಮಗ ಎಂದರೆ ಸರಿ. ದಿಃ 05.06.1990 ರಂದು ಹುಟ್ಟಿರುತ್ತೇನೆ. ಈಗ ತೋರಿಸುತ್ತಿರುವ ಕ್ರಯ ಪತ್ರ ನನ್ನ ತಂದೆ ಹಾಗೂ ನಾನು ಅಪ್ರಾಪ್ತ ವಯಸ್ಕನಾದಗ ನನ್ನನ್ನು ಪ್ರತಿನಿಧಿಸಿ ಮಹದೇವಮ್ಮ ರವರಿಗೆ ದಿಃ 29.03.1994 ರಂದು ನೊಂದಾಯಿತ ಕ್ರಯಪತ್ರದ ಮೂಲಕ ಸರ್ವೇ ನಂ. 121/2 ರಲ್ಲಿ 18 ಗುಂಟೆ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಕ್ರಯಪತ್ರದ ಪ್ರತಿಯನ್ನು ಸಾಕ್ಷಿಗೆ ತೋರಿಸಿ ಇದು ನಿಮ್ಮ ತಂದೆಯ ಸಹಿ ಹೌದಾ ಎಂದರೆ ಸಾಕ್ಷಿಯು ನನ್ನ ತಂದೆ ಯಾವ ರೀತಿ ಸಹಿ ಮಾಡುತ್ತಾರೋ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ದಿಃ 18.06.1981 ರ ವಿಭಾಗದಲ್ಲಿ ಸರ್ವೇ ನಂ. 112/2 ರಲ್ಲಿ 2 ಎಕರೆ 18 ಗುಂಟೆ, ಸರ್ವೇ ನನ. 361/1 ರಲ್ಲಿ 4 ಗುಂಟೆ, ಸರ್ವೇ ನಂ. 121/2 ರಲ್ಲಿ 18 ಗುಂಟೆ, 8 ಕಂಬದ ತೊಟ್ಟಿ ಮನೆ, 3 ಗೊಬ್ಬಳಿ ಮರ ಮತ್ತು 8 ತೆಂಗಿನ ಮರ ಇವುಗಳು ಮರಂಕಮ್ಮ ರವರಿಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಅದೇ ಪಾಲು ಪಟ್ಟಿಯಲ್ಲಿ ಸರ್ವೇ ನಂ. 88 ರಲ್ಲಿ 1 ಎಕರೆ 12 ಗುಂಟೆ, ಸರ್ವೇ ನಂ. 121/2 ರಲ್ಲಿ 1 ಎಕರೆ 30 ಗುಂಟೆ, ಸರ್ವೇ ನಂ. 361/1 ರಲ್ಲಿ 4 ಗುಂಟೆ, ಸರ್ವೇ ನಂ. 300 ರಲ್ಲಿ 1 ಗುಂಟೆ, ಮೂರು ಅಂಕಣದ ನಾಡ ಹೆಂಚಿನ ಮನೆ ಇವುಗಳು ಕರಿನಾಯಕರವರ 2 ನೇ ಹೆಂಡತಿ ಸಣ್ಣಮ್ಮ ಇವರಿಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಪಾಲು ಪಟ್ಟಿ ಸರಿ ಇಲ್ಲ ಎಂದು ಯಾವ ನ್ಯಾಯಾಲಯದಲ್ಲಿಯೂ ಪ್ರಶ್ನಿಸಿರುವುದಿಲ್ಲ. ನನ್ನ ತಂದೆಯೂ 1994 ರಲ್ಲಿ ಸರ್ವೇ ನಂ. 121/2 ರಲ್ಲಿ 18 ಗುಂಟೆ 5 ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯವರು ಸದರಿ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ನಾವು ಸ್ವಾದೀನದಲ್ಲಿದ್ದೇವೆ ಎಂದು ತೋರಿಸಲು ದಾಖಲೆ ಇದೆ. ಮುಂದುವರೆದು ನಾವೆಲ್ಲ ಒಟ್ಟಿಗೆ ಉಳುಮೆ ಮಾಡುತ್ತಿದ್ದೇವು ಎಂದು ಉತ್ತರಿಸಿರುತ್ತಾರೆ. ನಮಗೂ

ನಮಗೂ ಸದರಿ ಆಸ್ತಿಗಳಿಗೂ ಸಂಬಂಧ ಇಲ್ಲದ ಕಾರಣ ನಾವು ಸದರಿ ಜಮೀನುಗಳಲ್ಲಿ ಉಳುಮೆ ಮಾಡುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ. ಮರಂಕಮ್ಮ ರವರಿಗೆ ಪಾಲು ಪಟ್ಟಿಯಲ್ಲಿ ಬಂದ ಎಲ್ಲಾ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ.

ಮರಂಕಮ್ಮನ ಸೊಸೆಯಾದ ಸಾಕಮ್ಮ ಮತ್ತು ಮೊಮ್ಮಕ್ಕಳಾದ ಭಾಗ್ಯ ಮತ್ತು ರವಿಕುಮಾರ್ ಎಂದರೆ ನಾವು ಮೈಸೂರಿನ ಉಪವಿಭಾಗಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇವೆ ಎಂದರೆ ಗೊತ್ತಿಲ್ಲ. ಸದರಿ ಮೇಲ್ಮನವಿಯಲ್ಲಿ ದಿಃ 18.06.1981 ರಂದು ಪಾಲುಪಟ್ಟಿಯಾಗಿದೆ ಎಂದು ಹೇಳಿರುತ್ತೇವೆ ಎಂದರೆ ಗೊತ್ತಿಲ್ಲ. ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ಗೊತ್ತಿಲ್ಲ. ದಾವ ಆಸ್ತಿಗಳಲ್ಲಿ ಪರಿಹಾರ ಕೇಳುವ ಹಕ್ಕು ನಮಗೆ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 5 ಮತ್ತು 7 ನೇ ಪ್ರತಿವಾದಿಯವರಿಗೆ ತೊಂದರೆ ನೀಡುವ ಉದ್ದೇಶದಿಂದ ದಾವೆಗಳನ್ನ ಹೂಡುತ್ತಿದ್ದೇವೆ ಎಂದರೆ ಸರಿಯಲ್ಲ. ದಾವ ಸ್ವತ್ತುಗಳು ಜಂಟಿ ಸ್ವಾಧೀನದಲ್ಲಿದೆ ಎಂದು ತೋರಿಸಲು ದಾಖಲೆ ಇಲ್ಲ. ಮುಂದುವರೆದು ಜಂಟಿ ಸ್ವಾದೀನ ಇಲ್ಲ ಅಜ್ಜಿ ತಾತನ ಹೆಸರಿನಲ್ಲಿದೆ ಎಂದು ಉತ್ತರಿಸಿರುತ್ತಾರೆ.

**ಪಾಟೀ ಸವಾಲುಃ 8 ನೇ ಪ್ರತಿವಾದಿ ಪರ ವಕೀಲರಿಂದಃ**

ನನ್ನ ಅಕ್ಕ 1 ನೇ ವಾದಿ ಇವರ ಜನ್ಮ ದಿನಾಂಕ ಗೊತ್ತಿಲ್ಲ. ನಾನು ದ್ವಿತಿಯ ಪಿ.ಯು.ಸಿ. ವರೆಗೆ ಓದಿರುತ್ತೇನೆ. ನನಗೆ ವ್ಯವಹಾರ ಜ್ಞಾನ ಇದೆ. ದಾವ ಪತ್ರದಲ್ಲಿ ನೀಡಿರುವ ವಿಳಾಸದಲ್ಲಿ ನಾವು ಹುಟ್ಟಿ ಬೆಳೆದಿರುತ್ತೇವೆ ಎಂದರೆ ಸರಿ. ನನ್ನ ತಂದೆ ಯಾವಗ ತೀರಿಹೋಗಿರುತ್ತಾರೆ ಎಂದು ನೆನಪಿಲ್ಲ. ನನ್ನ ತಾಯಿ ಜೀವಂತವಾಗಿದ್ದಾರೆ. ನಾನು ಮತ್ತು ನನ್ನ ಅಕ್ಕ ನನ್ನ ತಂದೆತಾಯಿ ಇವರ ಪೋಷಣೆಯಲ್ಲಿ ಬೆಳೆದಿರುತ್ತೇವೆ ಎಂದರೆ ಸರಿ. ನನ್ನ ತಂದೆಯ ಜೊತೆ ಬಾಂಧವ್ಯ ಚೆನ್ನಾಗಿತ್ತು ಎಂದರೆ ಸಾಕ್ಷಿಯು ನನ್ನ ತಂದೆ ಮಧ್ಯಪಾನ ಮಾಡುತ್ತಿದ್ದು ಆಗಾಗ ಜಗಳ ಮಾಡುತ್ತಿದ್ದರು ಎಂದು ಉತ್ತರಿಸಿರುತ್ತಾರೆ. ಯಾವಗಿನಿಂದ ಮಧ್ಯಪಾನ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮಧ್ಯಪಾನ ಮಾಡುತ್ತಿದ್ದರು ಎಂದು ದಾವ ಪತ್ರದಲ್ಲಿ ಹೇಳಿರುವುದಿಲ್ಲ. ಇದೇ ಮೊದಲ ಬಾರಿ ಹೇಳುತ್ತಿದ್ದೇನೆ ಎಂದರೆ ಸರಿ. ಸರ್ವೇ ನಂ. 361/2 ರಲ್ಲಿ 12 ಗುಂಟೆ, 112/1 ರಲ್ಲಿ 2 ಎಕರೆ

18 ಗುಂಟೆ ಜಮೀನು ಇದೆ ಎಂದು ಹೇಳಿದ್ದು ದಾವ ಪತ್ರದಲ್ಲಿ ಸದರಿ ಆಸ್ತಿಗಳನ್ನು ಸೇರಿಸಿದ್ದೀರಾ ಎಂದರೆ ಸಾಕ್ಷಿಯು ಸರ್ವೇ ನಂ. 361/2 ರಲ್ಲಿ 12 ಗುಂಟೇ ಸೇರಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಾವು ಈಗ ವಾಸವಾಗಿರುವ ಮನೆ ನನ್ನ ತಾಯಿಯ ಹೆಸರಿನಲ್ಲಿದೆ. ಸದರಿ ಮನೆ ನನ್ನ ತಾಯಿಯ ಹೆಸರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಸದರಿ ಮನೆಯ ದಾಖಲೆಗಳನ್ನು ನೋಡಿರುವುದಿಲ್ಲ. ಅದೇ ಮನೆಯಲ್ಲಿ ನನ್ನ ತಂದೆಯ ಸಹ ಇದ್ದರೂ  ಎಂದರೆ ಸಾಕ್ಷಿಯು ನನಗೆ ನೆನಪು ಇರುವ ಹಾಗೆ ಅದೇ ಮನೆಯಲ್ಲಿ ಇದ್ದರೂ ಎಂದು ಉತ್ತರಿಸಿರುತ್ತಾರೆ. ಸರ್ವೇ ನಂ. 88 ರಲ್ಲಿ 1 ಎಕರೆ 12 ಗುಂಟೆ ಇದೆ. ಸರ್ವೇ ನಂ. 88 ಕ್ಕೆ ಎಷ್ಟು ಪೋಡ್ ಆಗಿದೆ ಎಂದು ಗೊತ್ತಿಲ್ಲ. ಐಟಂ ನಂ. 3 ದಾವ ಆಸ್ತಿಯು ಸರ್ವೇ ನಂ. 88 ಕ್ಕೆ ಮಾತ್ರ ಸಂಬಂಧಪಟ್ಟಿದ್ದು ಎಂದರೆ ಸರಿ. ಸರ್ವೇ ನಂ. 88 ರ ಚೆಕ್ಕು ಬಂಧಿಯನ್ನು ವಾದ ಪತ್ರದಲ್ಲಿ ತೋರಿಸಿರುವುದಿಲ್ಲ. ಸರ್ವೇ ನಂ. 88 ರಲ್ಲಿರುವ ಜಮೀನನ್ನು ನೋಡಿರುತ್ತೇನೆ. ನಾನು ಸರ್ವೇ ನಂ. 88 ರ ಚೆಕ್ಕುಬಂಧಿಯನ್ನು ತಿಳಿದುಕೊಳ್ಳಲು ಪ್ರಯತ್ನ ಪಟ್ಟಿರುವುದಿಲ್ಲ. ಸರ್ವೇ ನಂ. 88 ರಲ್ಲಿ ನಮಗೆ ಭಾಗ ಬರಬೇಕು ಎಂದು ಯಾವ ಆಧಾರದ ಮೇಲೆ ಹೇಳುತ್ತಿದ್ದೀರಾ ಎಂದರೆ ಅದು ಒಟ್ಟು ಕುಟುಂಬದ ಆಸ್ತಿ ಆದ ಕಾರಣ ಭಾಗ ಬರಬೇಕು ಎಂದು ಉತ್ತರಿಸಿರುತ್ತಾರೆ. ಸರ್ವೇ ನಂ. 88 ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುವುದಿಲ್ಲ. ಸರ್ವೇ ನಂ. 88 ಕರಿನಾಯಕರವರ ಹೆಸರಿನಲ್ಲಿ ಖಾತೆ ಇದ್ದು ಆನಂತರ ನೇತ್ರಾವತಿ ಹಾಗೂ ರಾಮಕೃಷ್ಣ ಇವರ ಹೆಸರಿನಲ್ಲಿದೆ. ಸರ್ವೇ ನಂ. 88 ಮೊದಲಿನಂದಲೂ ಕರಿನಾಯಕರವರ ಹೆಸರಿನಲ್ಲಿತ್ತು ಎಂದರೆ ಸರಿ. ಸರ್ವೇ ನಂ. 88 ರಲ್ಲಿ ಪೋಡಾಗಿ ಕರಿನಾಯಕ ರವರ ಹೆಸರಿನಲ್ಲಿ ಬೇರೆ ಜಮೀನು ಇರುವುದಿಲ್ಲ. ಚಿಕ್ಕಕರಿನಾಯಕ, ಮಹದೇವನಾಯಕ, ಸಣ್ಣಮ್ಮ, ಸ್ವಾಮಿ, ಹಾಗೂ ಹುಚ್ಚಯ್ಯ ಇವರೆಲ್ಲರೂ ಸೇರಿ ದಿಃ 01.02.1993 ರಂದು ನೊಂದಾಯಿತ ಕ್ರಯಪತ್ರದ ಮೂಲಕ ಸರ್ವೇ ನಂ. 88/1 ರಲ್ಲಿ 1 ಎಕರೆ 12 ಗುಂಟೆ ಜಮೀನನ್ನು 8 ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ.  ಸರ್ವೇ ನಂ. 88/1 ರ ಆರ್.ಟಿ.ಸಿ ಗಳು 1993 ರಿಂದಲೂ 8 ನೇ ಪ್ರತಿವಾದಿ ಇವರ ಹೆಸರಿನಲ್ಲಿದೆ ಎಂದರೆ ಸರಿ. ಸರ್ವೇ ನಂ. 88/1, 1993 ರಿಂದಲೂ 8 ನೇ ಪ್ರತಿವಾದಿಯ

ಸ್ವಾಧೀನದಲ್ಲಿದೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ಸದರಿ ಕ್ರಯಪತ್ರವನ್ನು ಪ್ರಶ್ನಿಸಿ ನಾನಗಾಲೀ ನನ್ನ ತಂದೆಯಾಗಲೀ ದಾವೆ ಹೂಡಿರುವುದಿಲ್ಲ ಎಂದರೆ ಗೊತ್ತಿಲ್ಲ. ಸರ್ವೆ ನಂ. 88 ನಮ್ಮ ಒಟ್ಟು ಕುಟುಂಬದ ಆಸ್ತಿ ಎಂದು 2014 ರ ನಂತರ ಗೊತ್ತಾಗಿರುತ್ತದೆ.

(ನ್ಯಾಯಾಲಯದ ಸಮಯ ಮುಗಿದ ಕಾರಣ ಪಾಟೀ ಸವಾಲಿಗೆ ಮುಂದೂಡಲಾಯಿತು.)

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.